# ಫ್ಲಿಪ್ ಕಾರ್ಟ್ ಮತ್ತು ಮಹೀಂದ್ರ ಲಾಜಿಸ್ಟಿಕ್ಸ್ ನ ಇಡಿಇಎಲ್ ಜತೆ ಒಪ್ಪಂದ

- **ಕಟ್ಟ-ಕಡೆಯ ಗ್ರಾಹಕನಿಗೂ ಉತ್ಪನ್ನ ತಲುಪಿಸಲು ಎಲೆಕ್ಟ್ರಿಕ್ ವಾಹನಗಳ(ಇವಿ) ನಿಯೋಜನೆಗೆ ಈ ಒಪ್ಪಂದ**
- **2030 ರ ವೇಳೆಗೆ ಸಂಪೂರ್ಣ ಇವಿ ನಿಯೋಜನೆ ಬದ್ಧತೆ ಹಿನ್ನೆಲೆಯಲ್ಲಿ ಫ್ಲಿಪ್ ಕಾರ್ಟ್ ಗೆ ನೆರವಾಗಲಿರುವ ಇಡಿಇಎಲ್**
- **ಇಡಿಇಎಲ್ ಸುಸ್ಥಿರ ಎಂಡ್-ಟು-ಎಂಡ್ ಡೆಲಿವರಿ ಸೇವೆಗಳನ್ನು ನೀಡುತ್ತದೆ**
- **ಇವಿಗಳು, ನುರಿತ ಚಾಲಕರು- ವಿತರಣಾ ಪ್ರತಿನಿಧಿಗಳು, ಚಾರ್ಜಿಂಗ್ ಸ್ಟೇಷನ್ ಗಳು, ಸಮಗ್ರ ತಂತ್ರಜ್ಞಾನ ಆಧಾರಿತ ನಿಯಂತ್ರಣ ಟಾವರ್ ಸೇರಿದಂತೆ ಅಗತ್ಯ ಮೂಲಸೌಕರ್ಯ ಒದಗಿಸಲಿರುವ ಇಡಿಇಎಲ್**

**ಬೆಂಗಳೂರು, ಏಪ್ರಿಲ್ 6, 2021**: ಭಾರತದ ಸ್ವದೇಶಿ ಈ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಮಹೀಂದ್ರ ಲಾಜಿಸ್ಟಿಕ್ಸ್ ಲಿಮಿಟೆಡ್ (ಎಂಎಲ್ಎಲ್)ನೊಂದಿಗೆ ಒಪ್ಪಂದ ಮಾಡಿಕೊಂಡಿರುವುದನ್ನು ಇಂದು ಘೋಷಣೆ ಮಾಡಿದೆ. ಈ ಒಪ್ಪಂದದ ಉದ್ದೇಶವೆಂದರೆ ದೇಶಾದ್ಯಂತ ಫ್ಲಿಪ್ ಕಾರ್ಟ್ ನ ಲಾಜಿಸ್ಟಿಕ್ಸ್ ಗೆ ಎಲೆಕ್ಟ್ರಿಕ್ ವಾಹನಗಳ ನಿಯೋಜನೆ ಮಾಡಿಕೊಳ್ಳುವುದಾಗಿದೆ. 2030 ರ ವೇಳೆಗೆ 25,000 ಕ್ಕೂ ಅಧಿಕ ಎಲೆಕ್ಟ್ರಿಕ್ ವಾಹನಗಳ(ಇವಿಗಳು)ನ್ನು ನಿಯೋಜನೆ ಮಾಡಿಕೊಳ್ಳುವ ಮೂಲಕ ಸಂಪೂರ್ಣವಾಗಿ ಎಲೆಕ್ಟ್ರಿಕ್ ಸಾರಿಗೆಯನ್ನು ಅಳವಡಿಸಿಕೊಳ್ಳುವ ಬದ್ಧತೆಯನ್ನು ಫ್ಲಿಪ್ ಕಾರ್ಟ್ ಹೊಂದಿದೆ. ಇದರ ಅಂಗವಾಗಿ ಮಹೀಂದ್ರ ಲಾಜಿಸ್ಟಿಕ್ಸ್ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಮಹೀಂದ್ರ ಲಾಜಿಸ್ಟಿಕ್ಸ್ ವಿವಿಧ ಒಇಎಂಗಳ ಜತೆಗೆ ಮಹತ್ವದ ಪಾತ್ರ ವಹಿಸಲಿದೆ ಮತ್ತು ಫ್ಲಿಪ್ ಕಾರ್ಟ್ ನ ಸಾರಿಗೆ ವ್ಯವಸ್ಥೆಯನ್ನು ಸುಸ್ಥಿರ ಸಾರಿಗೆ ವ್ಯವಸ್ಥೆಯಾದ ಇವಿಗಳಿಗೆ ರೂಪಾಂತರಗೊಳ್ಳಲು ಬೆಂಬಲವಾಗಿ ನಿಲ್ಲಲಿದೆ.

ಸುಸ್ಥಿರವಾದ ವ್ಯವಹಾರ ಪದ್ಧತಿಗಳತ್ತ ಪರಸ್ಪರ ಬದ್ಧತೆ ಮತ್ತು ದೂರದೃಷ್ಟಿಯೊಂದಿಗೆ ಮಹೀಂದ್ರ ಲಾಜಿಸ್ಟಿಕ್ಸ್ ತನ್ನದೇ ಸ್ವಂತ ಎಲೆಕ್ಟ್ರಿಕ್ ಡೆಲಿವರಿ ಬ್ರ್ಯಾಂಡ್ ಇಡಿಇಎಲ್ ಅನ್ನು 2020 ರ ಅಂತ್ಯದ ವೇಳೆಗೆ ಆರಂಭಿಸಿದೆ. ಇಡಿಇಎಲ್ ಗ್ರಾಹಕ ಕಂಪನಿಗಳು & ಈ-ಕಾಮರ್ಸ್ ಕಂಪನಿಗಳೊಂದಿಗೆ ಪಾಲುದಾರಿಕೆಯನ್ನು ಹೊಂದಿದ್ದು, ಭಾರತದಲ್ಲಿನ ಆರು ನಗರಗಳಲ್ಲಿನ ಕಟ್ಟಕಡೆಯ ಗ್ರಾಹಕನಿಗೂ ವಿತರಣೆ ಸೇವೆಯನ್ನು ಒದಗಿಸುತ್ತಿದೆ. ಇಡಿಇಎಲ್ ಮೂಲಕ ಎಂಎಲ್ಎಲ್ ಫ್ಲಿಪ್ ಕಾರ್ಟ್ ಗ್ರೀನ್ ಸಪ್ಲೈ ಚೇನ್ ಅನ್ನು ಸೃಷ್ಟಿಸುವ ತನ್ನ ಜರ್ನಿಯಲ್ಲಿ ದೊಡ್ಡ ಇವಿಗಳನ್ನು ನಿಯೋಜನೆ ಮಾಡುವುದಲ್ಲದೇ, ಇವಿ ನಿಯೋಜನೆ ಮತ್ತು ದೇಶಾದ್ಯಂತ ಕಾರ್ಯಾಚರಣೆಗಳಿಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿ ಮಾಡುತ್ತದೆ. ಇದರಲ್ಲಿ ಮೂಲಸೌಕರ್ಯ ಮತ್ತು ಚಾರ್ಜಿಂಗ್ ಸ್ಟೇಷನ್ ಗಳು, ಪಾರ್ಕಿಂಗ್ ಲಾಟ್ ಗಳು, ತರಬೇತಿ ಸ್ಥಳಗಳು, ರೂಟ್ ಪ್ಲಾನಿಂಗ್ ಮತ್ತು ಬ್ಯಾಟರಿ ಸ್ವಾಪಿಂಗ್ ಸ್ಟೇಷನ್ ಗಳ ನಿರ್ಮಾಣವೂ ಸೇರಿದೆ. ಮತ್ತೊಂದು ಪ್ರಮುಖವಾದ ಆದ್ಯತಾ ವಲಯವೆಂದರೆ ತಂತ್ರಜ್ಞಾನ ಮತ್ತು ಕಂಟ್ರೋಲ್ ಟಾವರ್ ಕಾರ್ಯಾಚರಣೆಗಳಿಂದ ಅತ್ಯುತ್ಕೃಷ್ಟವಾದ ಕಾರ್ಯದಕ್ಷತೆ ಮತ್ತು ವೆಚ್ಚ ಉಳಿತಾಯಕ್ಕೆ ಅವಕಾಶ ಮಾಡಿಕೊಡುತ್ತದೆ.

ಫ್ಲಿಪ್ ಕಾರ್ಟ್ ಈಗಾಗಲೇ ಅನೇಕ ಒಇಎಂಗಳ ಜತೆಗೆ ಪಾಲುದಾರಿಕೆಯನ್ನು ಹೊಂದಿದೆ ಮತ್ತು ತನ್ನ ಸಪ್ಲೈ ಚೇನ್ ನಲ್ಲಿ ಈಗಾಗಲೇ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳನ್ನು ಅಳವಡಿಕೆ ಮಾಡಿಕೊಂಡಿದೆ. ಎಂಎಲ್ಎಲ್ ಇಡಿಇಎಲ್ ನೊಂದಿಗೆ ಕಂಪನಿಯ ಪಾಲುದಾರಿಕೆಯೊಂದಿಗೆ ಈ ಕಾರ್ಯಚಟುವಟಿಕೆಯನ್ನು ಮತ್ತಷ್ಟು ಕ್ರಿಯಾಶೀಲ ಮಾಡಲಿದೆ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಿಯೋಜನೆ ಮಾಡಲು ನೆರವಾಗುತ್ತದೆ. ಇದಲ್ಲದೇ, ಮೂಲಸೌಕರ್ಯ ಮತ್ತು ತಂತ್ರಜ್ಞಾನ ಬೆಂಬಲವನ್ನು ಮೇಲ್ಮಟ್ಟಕ್ಕೆ ಹೆಚ್ಚಳ ಮಾಡಿಕೊಳ್ಳಲು ನೆರವಾಗುತ್ತದೆ. ಚಾರ್ಜಿಂಗ್ ತಾಣಗಳು, ಟ್ರ್ಯಾಕಿಂಗ್, ಅಸೆಟ್, ಸುರಕ್ಷತೆ ಮತ್ತು ವೆಚ್ಚದ ವಿಚಾರದಲ್ಲಿ ಕಂಪನಿಗೆ ಸಾಕಷ್ಟು ಉಪಯೋಗವಾಗಲಿದೆ. ಎಂಎಲ್ಎಲ್ ತನ್ನ ಎಲೆಕ್ಟ್ರಿಕ್ ವಿತರಣೆ ಬ್ರ್ಯಾಂಡ್ ಆಗಿರುವ ಇಡಿಇಎಲ್ ಅಡಿ ವಿವಿಧ ಮಾದರಿಯ ಮತ್ತು ವರ್ಗಗಳ ಎಲೆಕ್ಟ್ರಿಕ್ ವಾಹನಗಳನ್ನು ಒಇಎಂಗಳ ಮೂಲಕ ಪಡೆದುಕೊಳ್ಳಲಿದೆ. ಇಡಿಇಎಲ್ ಈಗಾಗಲೇ ಇವಿಗಳನ್ನು ದೊಡ್ಡ ಮಟ್ಟದಲ್ಲಿ ಕಾರ್ಯಾಚರಣೆ ಮಾಡುತ್ತಿದೆ. ಇದೀಗ ಫ್ಲಿಪ್ ಕಾರ್ಟ್ ನ ಉದ್ದೇಶಗಳಿಗೆ ಬೆಂಬಲ ನೀಡುವ ನಿಟ್ಟಿನಲ್ಲಿ ಗಣನೀಯ ಪ್ರಮಾಣದಲ್ಲಿ ಈ ಕಾರ್ಯಾಚರಣೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಇಡಿಇಎಲ್ ಬೆಂಗಳೂರು, ಮುಂಬೈ, ದೆಹಲಿ, ಪುಣೆ, ಕೊಲ್ಕತ್ತಾ ಮತ್ತು ಹೈದ್ರಾಬಾದ್ ನಗರಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಈ ವರ್ಷದ ಅಂತ್ಯದ ವೇಳೆಗೆ ಪ್ರಮುಖ 20 ನಗರಗಳಲ್ಲಿ ಕಾರ್ಯಾಚರಣೆಯನ್ನು ವಿಸ್ತರಿಸುವ ಉದ್ದೇಶವನ್ನು ಹೊಂದಿದೆ.

**ಹೇಮಂತ್ ಬದ್ರಿ, ಎಸ್ ವಿಪಿ ಸಪ್ಲೈ ಚೇನ್, ಫ್ಲಿಪ್ ಕಾರ್ಟ್ ಗ್ರೂಪ್ ಅವರು ಮಾತನಾಡಿ,** ``ಫ್ಲಿಪ್ ಕಾರ್ಟ್ ನ ದೊಡ್ಡ ಮಟ್ಟದ ಸುಸ್ಥಿರತೆಯ ಗುರಿಯನ್ನು ತಲುಪಲು ಲಾಜಿಸ್ಟಿಕ್ಸ್ ನ ವಿದ್ಯುದ್ದೀಕರಣ ಬಹುಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ನಾವು ಮಹೀಂದ್ರ ಲಾಜಿಸ್ಟಿಕ್ಸ್ ಅನ್ನು ಲಾಜಿಸ್ಟಿಕ್ ಪಾಲುದಾರರನ್ನಾಗಿ ಮಾಡಿಕೊಳ್ಳುತ್ತಿರುವುದಕ್ಕೆ ಸಂತಸವೆನಿಸುತ್ತಿದೆ. 2030 ರ ವೇಳೆಗೆ ನಮ್ಮ ಸಾರಿಗೆ ವ್ಯವಸ್ಥೆಯನ್ನು ಸಂಪೂರ್ಣ ಎಲೆಕ್ಟ್ರಿಕ್ ಮಾಡುವ ಗುರಿಯನ್ನು ತಲುಪುವಲ್ಲಿ ಈ ಪಾಲುದಾರಿಕೆ ಪ್ರಮುಖ ಪಾತ್ರ ವಹಿಸುತ್ತದೆ. ಸಾಮೂಹಿಕ ಪ್ರಯತ್ನಗಳ ಮೂಲಕ ನಾವು ದೇಶಾದ್ಯಂತ ಇವಿ ಅಳವಡಿಕೆಯನ್ನು ಮಾಡಿಕೊಳ್ಳಲಿದ್ದೇವೆ ಮತ್ತು ನಮ್ಮ ಲಾಜಿಸ್ಟಿಕ್ಸ್ ಫ್ಲೀಟ್ ಅನ್ನು ಹಂತಹಂತವಾಗಿ ಪೂರ್ಣವಾಗಿ ಎಲೆಕ್ಟ್ರಿಕ್ ವಾಹನಗಳನ್ನು ಅಳವಡಿಸಿಕೊಳ್ಳಲಿದ್ದೇವೆ" ಎಂದು ತಿಳಿಸಿದರು.

**ಈ ಒಂದು ಮೈಲಿಗಲ್ಲಿನ ಬಗ್ಗೆ ಮಾತನಾಡಿದ ಎಂಎಲ್ಎಲ್ ನ ಸಿಇಒ & ಎಂಡಿ ರಾಮಪ್ರವೀಣ್ ಸ್ವಾಮಿನಾಥನ್ ಅವರು**, ``ನಮ್ಮ ಆರ್ ಐಎಸ್ಇ ತತ್ತ್ವಶಾಸ್ತ್ರಕ್ಕೆ ಅನುಗುಣವಾಗಿ ಮಹೀಂದ್ರ ಲಾಜಿಸ್ಟಿಕ್ ಸುಸ್ಥಿರತೆಗೆ ಬದ್ಧವಾಗಿದೆ. ಇವಿ ಆಧಾರಿತ ಕಟ್ಟ ಕಡೆಯ ಮೈಲಿ ವಿತರಣಾ ಸೇವೆ ಸಲ್ಲಿಸಲು ಇಡಿಇಎಲ್ ಅನ್ನು ಅಳವಡಿಸಿಕೊಳ್ಳಲಾಗುತ್ತಿದೆ ಮತ್ತು ಗ್ರಾಹಕರಿಗೆ ಸುಸ್ಥಿರವಾದ, ವೆಚ್ಚ ಸ್ಪರ್ಧಾತ್ಮಕ ಹಾಗೂ ತಂತ್ರಜ್ಞಾನವನ್ನು ಸಕ್ರಿಯಗೊಳಿಸಿದ ಕಟ್ಟಕಡೆ ಮೈಲಿ ವಿತರಣಾ ಪರಿಹಾರವನ್ನು ಒದಗಿಸುತ್ತದೆ. ದೊಡ್ಡ ದೊಡ್ಡ ಗ್ರಾಹಕರೊಂದಿಗೆ ನಮ್ಮ ಆಳವಾದ ಸಹಭಾಗಿತ್ವದ ಆಧಾರದ ಮೇಲೆ ನಮ್ಮ ಜಾಲವನ್ನು ವಿಸ್ತರಿಸುವತ್ತ ನಾವು ಗಮನಹರಿಸುತ್ತೇವೆ. ಫ್ಲಿಪ್ ಕಾರ್ಟ್ ನೊಂದಿಗೆ ಮಾಡಿಕೊಂಡಿರುವ ಈ ಒಪ್ಪಂದದ ಬಗ್ಗೆ ಸಂತಸವೆನಿಸುತ್ತದೆ. ಈ ಸಹಭಾಗಿತ್ವವನ್ನು ದೀರ್ಘಾವಧಿವರೆಗೆ ನಾವು ಎದುರು ನೋಡುತ್ತೇವೆ" ಎಂದರು.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market and now Flipkart Wholesale, the Flipkart Group will continue to steer the transformation of commerce in India through technology.

**About Mahindra Logistics**

Mahindra Logistics Limited (MLL) is an integrated third-party logistics (3PL) service provider, specializing in supply chain management and enterprise mobility (people transport solutions). Founded more than a decade ago, MLL serves over 400+ corporate customers across various industries like Automobile, Engineering, Consumer Goods and E-commerce. The Company pursues an “asset-light” business model, providing customised and technology enabled solutions that span across the supply chain and people transport operations. MLL is part of the Mobility Services Sector of the Mahindra Group.

For more information, visit www.mahindralogistics.com

**About Mahindra**

The Mahindra Group is a USD 20.7 billion federation of companies that enables people to rise through innovative mobility solutions, driving rural prosperity, enhancing urban living, nurturing new businesses and fostering communities. It has a leadership position in utility vehicles, information technology, financial services and vacation ownership in India and is the world’s largest tractor company, by volume. It also enjoys a strong presence in agribusiness, components, commercial vehicles, consulting services, energy, industrial equipment, logistics, real estate, steel, aerospace, defence and two wheelers. Headquartered in India, Mahindra employs over 200,000 people across 100 countries.

Learn more about Mahindra on www.mahindra.com / Twitter and Facebook: @MahindraRise

**For more information, please contact media@flipkart.com**